# ಚದುರಂಗಿಯ ರಂಗು



■ ಚಿತ್ರ– ಬರಹ:
**ದೇವರು ಆರ್. ಭಟ್ಟ, ಕಲಗಾರು**





ಚದುರಂಗಿ ಗಿಡ (ಲಂಟಾನ) ಗುಡ್ಡ ಬೆಟ್ಟಗಳಲ್ಲಿ, ಬೇಲಿ ಸಾಲುಗಳಲ್ಲಿ ಎಲ್ಲೆಂದರಲ್ಲಿ 7 ಅಡಿ ಎತ್ತರದ ವರೆಗೂ ಬೆಳೆಯುವ ಪೊದೆ. ಒಂಟಿಯಾಗಿ ಬದುಕುವುದಕ್ಕಿಂತ ಬೇರೆ ಸಸ್ಯಗಳ ಗುಂಪಿನಲ್ಲಿ ಬೆಳೆಯುವುದೇ ಹೆಚ್ಚು. ಮೈತುಂಬ ಸಣ್ಣ ಸಣ್ಣ ಮುಳ್ಳುಗಳನ್ನು ಹೊಂದಿದ, ಆಯತದ ನಾಲ್ಕು ಮೂಲೆಗಳ ದಂಟನ್ನು ಹೊಂದಿರುತ್ತದೆ. ದಂಟಿನ ಎರಡೂ ಬದಿಯಲ್ಲಿ ಹಚ್ಚ ಹಸಿರಿನ ಎಲೆಗಳು ಮೈತುಂಬಾ ಸಣ್ಣ ಚುಂಗನ್ನು ಹೊಂದಿರುತ್ತದೆ. ಹೂ ಬಿಟ್ಟು ಪುಟ್ಟ ಪುಟ್ಟ ಮಣಿಗಳಂತಹ ಹಸಿರು ಕಾಯಿಗಳ ಗೊಂಚಲು, ಮಾಗಿದ ಕಪ್ಪನೆಯ ಹೊಳೆಯುವ ಹಣ್ಣು– ಪಕ್ಷಿಗಳಿಗೆ ಪ್ರಿಯವಾದ ಆಹಾರ. ತೆಳುವಾದ ಸಿಹಿ ಸಿಪ್ಪೆ ಒಳಗೊಂದು ಬೀಜವೂ ಇದೆ.

ಕಮ್ಮನೆ ಪರಿಮಳ ಹೊಂದಿರುವ ಸಸ್ಯ ಹೆಚ್ಚುಕಡಿಮೆ ವರ್ಷವಿಡೀ ಹೂ ಬಿಡುತ್ತಲೇ ಇರುತ್ತದೆ. ಒಂದೊಂದು ಹೂವೂ ಮೂಗುಬಟ್ಟಿನಂತೆ ಎರಡು ಮಿಲೀ ಮೀಟರಿನಷ್ಟು ವ್ಯಾಸ ಹೊಂದಿದೆ. ನೂರಾರು ಹೂವುಗಳು ಸೇರಿ ಒಂದು ಗುಚ್ಛವಾಗಿ ಅರಳಿ ಜಡೆ ಹೂವಿನ ಆಕಾರ ಹೊಂದಿರುತ್ತದೆ. ಇಂತಹ ನೂರಾರು ಗುಚ್ಛಗಳು ಸೇರಿ ಗಿಡಗಳಿಗೆ ಮೆರುಗು ನೀಡುತ್ತವೆ.

ಮಧ್ಯೆ ಗಾಢ ಕೇಸರಿ ಬಣ್ಣ ಹೊಂದಿದ್ದರೆ, ಅಂಚಿನಲ್ಲಿ ತೆಳುವಾದ ಕೇಸರಿಬಣ್ಣ, ತಿಳಿ ಹಳದಿ ಬಣ್ಣ, ಬಿಳಿ ಬಣ್ಣ, ನೇರಳೆಯಿಂದ ತಿಳಿ ನೇರಳೆ– ಹೀಗೆ ಅನೇಕ ಬಣ್ಣಗಳ ಮಿಶ್ರಣದ ಹೂವು ಪ್ರಕೃತಿಯನ್ನು ಸುಂದರಗೊಳಿಸಿದೆ. ವರ್ಣಚಿತ್ರ ಕಲಾವಿದರಿಗಂತೂ ಈ ಹೂವುಗಳ ಬಣ್ಣ ವೈವಿಧ್ಯವನ್ನು ಕಲಾಕೃತಿಯಲ್ಲಿ ಹಿಡಿಯುವುದು ಒಂದು ಸವಾಲೇ ಸರಿ.